ಬಿಳಿ–ಕಪ್ಪು ವರ್ಣದ ಜೋಡಿಗಳನ್ನು ಕುತೂಹಲದಿಂದ ಕಾಣಲಾಗುತ್ತದೆ. ನಾನು, ಮಾರ್ಕೋ ಮತ್ತು ನೀಲ್ ಒಟ್ಟಿಗೆ ಮನೆಯಿಂದ ಹೊರಟಾಗ ಗಾರ್ಡ್, ಮಾಲೀಕ ಎಲ್ಲರೂ ನಮ್ಮನ್ನು ದುರುಗುಟ್ಟಿ ನೋಡುತ್ತಿದ್ದರು. ನಾವು ಇಲ್ಲಿ ಚರ್ಚೆಗೆ ಕಾರಣವಾಗಿದ್ದೆವು. ಅನೇಕ ಕುಟುಂಬಗಳೊಂದಿಗೆ ನಮ್ಮ ಗೆಳೆತನವೇರ್ಪಟ್ಟಿತು; ಸಹಭೋಜನಗಳೂ ನಡೆಯುತ್ತಿದ್ದವು. ನೀಲ್‌ಗೆ ಆಟವಾಡಲು ಸಮವಯಸ್ಕ ಮಕ್ಕಳು ಸಿಕ್ಕರು.

ಪರಿಸರದಲ್ಲಿ ಜಿಮ್, ಸ್ವಿಮಿಂಗ್ ಪೂಲ್, ಜಾಗಿಂಗ್ ಟ್ರ್ಯಾಕ್, ಬ್ಯಾಡ್‌ಮಿಂಟನ್ ಕೋರ್ಟ್, ಟೆನಿಸ್ ಕೋರ್ಟ್, ಹಸುರು ತೋಟಗಳಿದ್ದವು... ಎಲ್ಲಾ ಅನುಕೂಲಗಳೂ ಇಲ್ಲಿದ್ದವು, ಇಂಥ ಅನುಕೂಲಗಳು ನಮಗೆ ಯಾವುದೇ ಶ್ರೀಮಂತ ದೇಶಗಳ ವಸತಿ ಪ್ರದೇಶಗಳಲ್ಲಿ ಲಭಿಸಿರಲಿಲ್ಲ. ಇಲ್ಲಿ ವಿಭಿನ್ನ ಆಕಾರಗಳ ಲಕ್ಷುರಿ ಅಪಾರ್ಟ್‌ಮೆಂಟ್‌ಗಳಿದ್ದವು. ನಾವು ಥ್ರೀ ಬಿಹೆಚ್‌ಕೆ ಅಪಾರ್ಟ್‌ಮೆಂಟನ್ನು ಕಂಪನಿ ಲೀಸ್‌ನಲ್ಲಿ ಬಾಡಿಗೆಗೆ ಪಡೆದೆವು, ಅದರೊಂದಿಗೆ ಸರ್ವೆಂಟ್ ರೂಮನ್ನೂ ಪಡೆದೆವು.

ನಮ್ಮ ಅಪಾರ್ಟ್‌ಮೆಂಟಿನ ಎದುರು ವಜ್ರ ವ್ಯಾಪಾರಿಯ ಪರಿವಾರ ವಾಸಿಸುತ್ತಿತ್ತು. ಮನೆಯ ಮುಖಂಡ ರೋಶನ್ ಲಾಲ್‌ರ ಬಂಗಾರದ ಅಂಗಡಿ ಬೆಂಗಳೂರಿನ ಒಂದು ಪ್ರಮುಖ ರಸ್ತೆಯಲ್ಲಿತ್ತು. ಅವರು ನಗರದ ಪ್ರತಿಷ್ಠಿತ ಚಿನ್ನ–ಬೆಳ್ಳಿ ವ್ಯಾಪಾರಿಗಳಾಗಿದ್ದರು. ಅವರ ಮಕ್ಕಳು ಮತ್ತು ಸೊಸೆಯರು ಸಹ ಅಂಗಡಿಯಲ್ಲಿ ಕೂರುತ್ತಿದ್ದರು. ಹೆಂಡತಿ ಮನೆಯ ಜವಾಬ್ದಾರಿಯನ್ನು ಹೊತ್ತಿದ್ದು, ಎಲ್ಲರಿಗೂ ಊಟ ತಿಂಡಿಯ ವ್ಯವಸ್ಥೆಯನ್ನು ಮಾಡುತ್ತಿದ್ದಳು. ವ್ಯಾಪಾರಿಯ ಮೊಮ್ಮಗ ಶುಭಮ್, ನೀಲ್‌ನ ಸಮವಯಸ್ಕನಾಗಿದ್ದ. ಅವನು ಓದುತ್ತಿದ್ದ ಶಾಲೆಗೇ ನಾವು ನೀಲ್‌ನನ್ನು ದಾಖಲಿಸಿದೆವು.

ವಜ್ರ ವ್ಯಾಪಾರಿಗಳ ಪರಿವಾರ ಎಲ್ಲರೊಂದಿಗೂ ಕಲೆಯುತ್ತಿತ್ತು. ಅವರು ನಮಗೆ ತುಂಬಾ ಸಹಾಯಕರಾಗಿದ್ದರು. ನಾವಿಲ್ಲಿಗೆ ಹೊಸದಾಗಿ ಬಂದಾಗ ಅವರು ನಮ್ಮನ್ನು ಚಹಾ ಸೇವಿಸಲು, ಊಟ ಮಾಡಲು ಆಮಂತ್ರಿಸುತ್ತಿದ್ದರು. ಒಂದು ಕಾಲದಲ್ಲಿ ವಜ್ರ ವ್ಯಾಪಾರಿಗಳಾದ ರೋಶನ್ ಲಾಲರ ತಂದೆ ರಾಜಸ್ಥಾನದಿಂದ ಬೆಂಗಳೂರಿಗೆ ಬಂದು ನೆಲೆಸಿದ್ದರು. ಅವರದು ಹಿಂದಿ ಭಾಷಾ ಪರಿವಾರವಾಗಿತ್ತು. ಮೂರು ಪೀಳಿಗೆಗಳಿಂದ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾಗ್ಯೂ, ಅವರು ಬೆಂಗಳೂರನ್ನು ತಮ್ಮ ನಗರವೆಂದು ತಿಳಿಯುತ್ತಿರಲಿಲ್ಲ, 'ಮಗಳೇ, ನೀನು ಡೆನ್ಮಾರ್ಕ್‌ನಲ್ಲಿ ಪ್ರವಾಸಿ ಭಾರತೀಯಳಾಗಿದ್ದರೆ, ನಾವಿಲ್ಲಿ ಬೆಂಗಳೂರಿನಲ್ಲಿದ್ದೇವೆ' ಎನ್ನುತ್ತಿದ್ದರು. ಅವರು ಹಿಂದಿಯನ್ನಲ್ಲದೆ, ಸ್ಥಳೀಯ ಭಾಷೆ ಕನ್ನಡವನ್ನು ಸಹ ಮಾತನಾಡುತ್ತಿದ್ದರು. ನಾನು ಎಲ್ಲಿಗಾದರೂ ಹೋಗಬೇಕಾದ ಸಂದರ್ಭ ಬಂದಾಗ ನೀಲ್‌ನನ್ನು ಅವರ ಮನೆಯಲ್ಲಿ ಬಿಡುತ್ತಿದ್ದೆ. ಸಂತಸದ ಸಮಯವಾಗಿರಲಿ, ದುಃಖದ ಸಮಯವಾಗಿರಲಿ, ನೆರೆಹೊರೆಯವರು ಉಪಯೋಗಕ್ಕೆ ಬರುವಷ್ಟು ಸಂಬಂಧಿಕರು ಬರುವುದಿಲ್ಲ. ಒಳ್ಳೆಯ ನೆರೆಹೊರೆಯವರು ಸಿಗುವುದು ಸಹ ಅದೃಷ್ಟವೇ.

ವಜ್ರ ವ್ಯಾಪಾರಿಗಳ ಪರಿವಾರ ಧಾರ್ಮಿಕ ಪ್ರವೃತ್ತಿಯನ್ನು ಹೊಂದಿತ್ತು. ರೋಶನ್ ಲಾಲ್ ಮತ್ತು ಅವರ ಪತ್ನಿ ನಿತ್ಯ ಮಂದಿರಕ್ಕೆ ಹೋಗುತ್ತಿದ್ದರು, ಪ್ರತಿಯೊಂದು ಹಬ್ಬ ಹರಿದಿನಗಳಲ್ಲಿ ಅವರ ಮನೆಯಲ್ಲಿ ಭಜನೆ–ಕೀರ್ತನೆ ನಡೆಯುತ್ತಿತ್ತು. ಪೂಜೆ ಪುನಸ್ಕಾರ, ಮಂತ್ರಪಠಣ, ಹೋಮಹವನ, ಧಾರ್ಮಿಕ ಕಥಾ ವಾಚನಗಳು ನಡೆಯುತ್ತಿದ್ದವು. ಅವರ ಪರಿವಾರ ದೊಡ್ಡದಾಗಿದ್ದು, ಸದಾ ಗಿಜಿಗಿಜಿಗುಡುತ್ತಿತ್ತು.

ರೋಶನ್ ಲಾಲರ ನಗುಮುಖದ ಸ್ವಭಾವ ನಮಗೆ ತುಂಬಾ ಇಷ್ಟವಾಗುತ್ತಿತ್ತು. ಅವರು ಎಲ್ಲರೊಂದಿಗೆ ವಿನಮ್ರತೆಯಿಂದ, ಮಧುರವಾಗಿ ಮಾತನಾಡುತ್ತಿದ್ದರು. ನನಗೆ ಹಿಂದಿ ಬರುತ್ತದೆ, ನಾನು ನಿಮ್ಮೊಂದಿಗೆ ಹಿಂದಿಯಲ್ಲಿ ಮಾತನಾಡಲು ಇಷ್ಟಪಡುತ್ತೇನೆ ಎಂದು ಅವರಿಗೆ ಅನೇಕ ಬಾರಿ ಹೇಳಿದ್ದೆ. ಆದರೆ ಅವರು ನಮ್ಮೊಂದಿಗೆ ಇಂಗ್ಲಿಷಿನಲ್ಲಿ ಮಾತನಾಡಲು ಪ್ರಯತ್ನಿಸುತ್ತಿದ್ದರು. ಯೂರೋಪಿನಲ್ಲಿದ್ದು ಮತ್ತು ಫ್ರೆಂಚ್, ಸ್ಪ್ಯಾನಿಷ್, ಡೆನಿಶ್, ಜರ್ಮನ್ ಜನರನ್ನು ಭೇಟಿಯಾದ ನಂತರ ನನಗೆ, ಅಭಿಜಾತ ಅಥವಾ ಶ್ರೇಷ್ಠ ವರ್ಗವನ್ನು ಅರ್ಥ ಮಾಡಿಕೊಳ್ಳಲು ಇಂಗ್ಲಿಷ್ ಭಾಷೆ ಬರುವ ಅಗತ್ಯ ಲೇಶಮಾತ್ರವೂ ಇಲ್ಲ ಎಂದು ಅನ್ನಿಸಿತ್ತು.

ಒಬ್ಬ ಭಾರತೀಯ, ಇನ್ನೊಬ್ಬ ಭಾರತೀಯ ನೊಂದಿಗೆ ಇಂಗ್ಲಿಷಿನಲ್ಲಿ ಮಾತನಾಡುವುದನ್ನು ನೋಡಿದಾಗ ನನಗೆ ಆ ಘಟನೆ ನೆನಪಾಗುತ್ತದೆ... ನಾನಾಗ ಹೊಸದಾಗಿ ಡೆನ್ಮಾರ್ಕ್‌ಗೆ ಹೋಗಿದ್ದೆ. ನಾನು ಮತ್ತು ಜೋಶ್ ಟೀವೋಲಿ ಗಾರ್ಡನ್‌ನಲ್ಲಿ ಅಡ್ಡಾಡುತ್ತಿದ್ದೆವು. ನಾವು ಒಂದು ಐಸ್‌ಕ್ರೀಮ್ ಪಾರ್ಲರ್‌ನಲ್ಲಿ ಕೂತು ಐಸ್‌ಕ್ರೀಮ್ ತಿನ್ನುತ್ತಿದ್ದೆವು. ಸಮೀಪದಲ್ಲಿ ಕೂತಿದ್ದ ಡೆನಿಶ್ ಯುವತಿಯೊಬ್ಬಳು ನನ್ನನ್ನು ಕೇಳಿದಳು, 'ನೀವು ಇಂಡಿಯನ್ ಹೌದಾ?'

ನಾನು ಹೌದು ಎಂಬಂತೆ ತಲೆಯಾಡಿಸಿದೆ.

'ಇಂಡಿಯಾದಲ್ಲಿ ಅನೇಕ ಭಾಷೆಗಳಿವೆ, ಪ್ರತಿಯೊಂದು ರಾಜ್ಯಕ್ಕೂ ಒಂದು ಭಾಷೆಯಿದೆ ಎಂದು ನಾನು ಕೇಳಿದ್ದೇನೆ. ಆದರೆ ಇಂಡಿಯಾದವರಾದ ನೀವು ಪರಸ್ಪರ ಇಂಗ್ಲಿಷಿನಲ್ಲಿ ಏಕೆ ಮಾತನಾಡುತ್ತೀರ?' ಎಂದು ಅವಳು ಕೇಳಿದಳು.

'ಭಾರತದಲ್ಲಿ ಅನೇಕ ಭಾಷೆಗಳಿವೆ, ಅದಕ್ಕೇ ಇಂಗ್ಲಿಷಿನಲ್ಲಿ ಮಾತನಾಡುತ್ತಾರೆ. ಒಂದು ಪ್ರಾಂತದವರು ಇನ್ನೊಂದು ಪ್ರಾಂತದವರನ್ನು ಅರ್ಥ ಮಾಡಿಕೊಳ್ಳಲು ಎಲ್ಲರಿಗೂ ಒಂದು ಸಾಮಾನ್ಯ ಭಾಷೆ ಬೇಕಲ್ಲ...' ಎಂದೆ ನಾನು.

'ಆದರೆ ನೀವು ನಿಮ್ಮ ಮಗನೊಂದಿಗೂ ಇಂಗ್ಲಿಷಿನಲ್ಲಿ ಮಾಡನಾಡುತ್ತಿದ್ದೀರಿ, ಏಕೆ?' ನಾನು ಉತ್ತರಿಸದಾದೆ.

'ಏಕೆಂದರೆ ಬ್ರಿಟಿಷರು ಅಷ್ಟು ವರ್ಷ ಭಾರತದಲ್ಲಿ ಆಡಳಿತ ನಡೆಸಿದರು?'

ನಾನು ನನ್ನ ಹೆಗಲನ್ನು ಕುಣಿಸಿದೆ.

ಸರಿ, ವಜ್ರ ವ್ಯಾಪಾರಿಗಳ ಉತ್ತರ ಹೀಗಿತ್ತು: 'ನೋಡಮ್ಮಾ, ನಿಮ್ಮೊಂದಿಗೆ ಮಾತನಾಡಿ ನಾನು ನನ್ನ ಇಂಗ್ಲಿಷ್ ಭಾಷೆಯನ್ನು ಸುಧಾರಿಸಿಕೊಳ್ಳುತ್ತಿದ್ದೇನೆ. ಈಗ ಇದು ಅಂತರರಾಷ್ಟ್ರೀಯ ನಗರವಾಗುತ್ತಿದೆ; ಇಂಗ್ಲಿಷ್ ಪ್ರಭಾವ ದಿನೇ ದಿನೇ ಹೆಚ್ಚುತ್ತಿದೆ. ಜಗತ್ತಿನ ನಾನಾ ದೇಶಗಳಿಂದ ಜನ ನನ್ನ ಶೋರೂಮಿಗೆ ಬರುತ್ತಾರೆ. ಅವರು ಹಿಂದಿ ಅಥವಾ ಕನ್ನಡವನ್ನು ಮಾತನಾಡುವುದಿಲ್ಲ. ನಾನು ಅವರೊಂದಿಗೆ ಇಂಗ್ಲಿಷಿನಲ್ಲಿ ಮಾತನಾಡಬೇಕಾಗುತ್ತೆ.'

ಅವರ ರಾಜಸ್ಥಾನಿ ಬಂಗಾರದ ಅಂಗಡಿಯ ಶೋರೂಮಿಗೆ ನಾವು ಸಹ ಅನೇಕ ಬಾರಿ ಭೇಟಿಯಿತ್ತೆವು, ನಾವು ಅವರ ಅಂಗಡಿಗೆ ಹೋದಾಗಲೆಲ್ಲಾ, ಅವರು ಪ್ರೀತಿಯಿಂದ ಮಾತನಾಡಿಸಿ, ತಿನ್ನಲು ಏನಾದರು ಕೊಡುತ್ತಿದ್ದರು. ನಾನು ಅಮೂಲ್ಯ ಒಡವೆಗಳು ಮತ್ತು ಹೊಳೆಯುವ ಮಣಿಗಳ ಹಾರಗಳನ್ನು ನೋಡುತ್ತಿದ್ದೆ.

'ನೀವೂ ಒಂದು ವಜ್ರದ ಹಾರ ಅಥವಾ ಉಂಗುರ ತೆಗೆದುಕೊಳ್ಳಿ' ಎಂದವರು ನನಗೆ ಹೇಳುತ್ತಿದ್ದರು. ಅವರ ಮಾತು ನನಗೆ ಕಚಗುಳಿ ಕೊಡುತ್ತಿತ್ತು.

'ನೀವು ಸೆಲೆಕ್ಟ್ ಮಾಡಿ... ಒಳ್ಳೆ ಡಿಸ್ಕೌಂಟ್ ಕೊಡ್ತೀನಿ' ಎನ್ನುತ್ತಿದ್ದರು.

ನಾನು ಚಿನ್ನದ ಜುಮುಕಿ ಖರೀದಿಸಿದೆ. ನನ್ನ ಹಳೆಯ ಆಭರಣಗಳನ್ನು ಬದಲಾಯಿಸಿ, ಹೊಸ ಆಭರಣಗಳನ್ನು ಮಾಡಿಸಿಕೊಂಡೆ. ಅವರು ಬೆಲೆಯಲ್ಲಿ ರಿಯಾಯಿತಿ ಸಹ ಕೊಟ್ಟರು.

ಮಲ್ಟಿನ್ಯಾಷನಲ್ ಕಂಪನಿಗಳಲ್ಲಿ ಕೆಲಸ ಮಾಡುವವರು, ತಮ್ಮ ಸಮವಯಸ್ಕರೊಂದಿಗೆ ಸುಖದ ಅನುಭವವನ್ನು ಮನಗಾಣುತ್ತಾರೆ; ವಜ್ರ ವ್ಯಾಪಾರಿಗಳ ಆತ್ಮೀಯತೆ ಸಹ ತನ್ನದೇ ಮಿತಿಯಲ್ಲಿತ್ತು. ರೋಶನ್ ಲಾಲ್ ಮತ್ತು ಅವರ ಪತ್ನಿಯನ್ನು ಭೇಟಿಯಾದಾಗ ನನಗೆ ನಮ್ಮ ಮನೆಯ ಹಿರಿಯರನ್ನು ಭೇಟಿಯಾದ ಅನುಭವವಾಗುತ್ತಿತ್ತು; ಅವರ ಸೊಸೆ–ಮಗನನ್ನು ಭೇಟಿಯಾದಾಗ ನನ್ನ ಕಸಿನ್ಸ್ ಅನ್ನು ಭೇಟಿಯಾದ ಅನುಭವವಾಗುತ್ತಿತ್ತು.

ಮಾರ್ಕೋನಲ್ಲಿ ಮಿಶ್ರಿತ ಭಾವನೆಗಳಿದ್ದವು. ಒಮ್ಮೆ ಅವನು ಭಾರತ ಮತ್ತು ಭಾರತೀಯರನ್ನು ಮನಸಾರೆ ಪ್ರಶಂಸಿಸುತ್ತಿದ್ದ; ಮಗದೊಮ್ಮೆ ಕೆಟ್ಟ ಮಾತುಗಳನ್ನು ಹೇಳುತ್ತಿದ್ದ. ನಿಜ ಹೇಳಬೇಕೆಂದರೆ, ನಾವೇನು ಅನುಭವಿಸುತ್ತೇವೆಯೋ, ಅದು ನಮ್ಮ ನಡತೆಯನ್ನು ಅವಲಂಬಿಸುತ್ತದೆ. ಎಲ್ಲಾ ಸ್ಥಳಗಳಲ್ಲಿ ಒಳ್ಳೆಯದೇನಿದೆ ಎಂಬ ಬಗ್ಗೆ ಗಮನವನ್ನು ಕೇಂದ್ರೀಕರಿಸುವುದು ಹಾಗೂ ಕೆಟ್ಟದ್ದರ ಬಗ್ಗೆ ಗಮನವನ್ನು ಕೊಡದಿರಲು ಪ್ರಯತ್ನಿಸಬೇಕಾಗುತ್ತದೆ. ಕೆಲವರು ಇದರಲ್ಲಿ ಯಶಸ್ಸನ್ನು ಪಡೆದರೆ, ಕೆಲವರು ವಿಫಲರಾಗುತ್ತಾರೆ. ಅವರಿಗೆ ಅವರದೇ ಆದ ಪೂರ್ವಗ್ರಹಗಳಿರುತ್ತವೆ. ನಾವು ಇಲ್ಲಿಯ ಸ್ನೇಹಿತರನ್ನು ಸಂಧಿಸಿದಾಗ ಚರ್ಚೆ ಪ್ರಾರಂಭವಾಗುತ್ತಿತ್ತು. ಎಲ್ಲರೂ ಬೇರೆ ದೇಶದಲ್ಲಿದ್ದ ಬಗ್ಗೆ ತಮ್ಮತಮ್ಮ ಅನುಭವಗಳನ್ನು ಹೇಳುತ್ತಿದ್ದರು. ಭಾರತದೊಂದಿಗೆ ವಿದೇಶಗಳನ್ನು ಹೋಲಿಕೆ ಮಾಡುತ್ತಿದ್ದರು.

(ಸಶೇಷ)